<u>ದಿನಾಂಕಃ**30-10-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>
<u>ಪಾಟೀ ಸವಾಲುಃ **1** ನೇ ಎದುರುದಾರರ ಪರ ಶ್ರೀ ಬಿ ಕೆ ವಿ .ವಕೀಲರಿಂದಃ</u>

ಘಟನೆ ಆದ ಬಗ್ಗೆ ಪೊಲೀಸರಿಗೆ ನಾನೆ ದೂರು ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ನನ್ನ ದೂರಿನಲ್ಲಿ ಕಾರು ಸಂಖ್ಯೆ ಮತ್ತು ಅದರ ಚಾಲಕ ಮತ್ತು ಕಾರಿನ ಬಣ್ಣ ಯಾವುದು ಇರುತ್ತದೆ ಎಂದು ಹೇಳಿರುವುದಿಲ್ಲ ಎಂದರೆ ಸರಿ. ನಾನು ಸದರಿ ದೂರಿನ ಆಧಾರದ ಮೇಲೆ ಸಿ.ಸಿ ಪ್ರಕರಣದಲ್ಲಿ ಸಾಕ್ಷಿದಾರಳಾಗಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿ. ನಾನು ಈ ಅರ್ಜಿಯ 1 ನೇ ಎದುರುದಾರರನ್ನು ಸದರಿ ಕ್ರಿಮಿನಲ್ ಪ್ರಕರಣದಲ್ಲಿ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡಿರುತ್ತೇನೆ ಎಂದರೆ ಸರಿ. ನಾನು ಕಾರು ಮತ್ತು 1 ನೇ ಎದುರುದಾರರ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ಪೊಲೀಸರಿಗೆ ಅಪಘಾತ ಸ್ಥಳದ ಬಗ್ಗೆ ಮಾಹಿತಿ ಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ಸಿ ಸಿ ಟಿವಿ ಫೂಟೇಜ್ ಆಧಾರದ ಮೇಲೆ 1 ನೇ ಎದುರುದಾರರ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ಹೇಳಿರುತ್ತೇನೆ. ದಿನಾಂಕ 30.04.2024 ರಂದು ಸಿಸಿ ಟಿ ವಿ ಫೂಟೇಜನ್ನು ನನಗೆ ಆಸ್ಪತ್ರೆಯಲ್ಲಿ ನನ್ನ ತಂದೆ ತೋರಿಸಿರುತ್ತಾರೆ. ಸದರಿ ಸಿಸಿ ಟಿ ವಿ ಫೂಟೇಜನ್ನು ಯಾರು ರೆಕಾರ್ಡ್ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಸಿಸಿ ಟಿ ವಿ ಫೂಟೇಜ್ ನಮ್ಮ ತಂದೆಗೆ ಯಾವ ರೀತಿ ದೊರಕಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಪೊಲೀಸರಿಗೆ ನಮ್ಮ ತಂದೆ ಸಿಸಿ ಟಿ ವಿ ಫೂಟೇಜನ್ನು ತಂದು ತೋರಿಸಿರುತ್ತಾರೆ ಎಂಬ ಬಗ್ಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

2. ಅಪಘಾತಕ್ಕೂ ಮತ್ತು 1 ನೇ ಎದುರುದಾರರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯುವ ಸಲುವಾಗಿ 1 ನೇ ಎದುರುದಾರರ ವಿರುದ್ಧ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೇಳಿದಂತೆ ಪರಿಹಾರ ಕೊಡುವ ಹೊಣೆಗಾರಿಕೆ 1 ನೇ ಎದುರುದಾರರ ಮೇಲೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 2 ಮತ್ತು 3 ನೇ ಎದುರುದಾರರು ಏಕ ಪಕ್ಷೀಯ ಇರುವುದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ